ಸುರಿದು ಯಾವಾಗ ಹಕ್ಕಿಗಳಿಂದ ಇದರ ಅಧಿಕೃತ ಉದ್ಘಾಟನೆಯಾಗುತ್ತದೋ ನೋಡೋಣ ಎಂದುಕೊಂಡು ಆಗಾಗ ಕಿಟಕಿ ಪಕ್ಕ ಹೋಗಿ ಮರೆಯಲ್ಲಿ ಕೂತು ಇಣುಕಲು ಶುರುಮಾಡಿದ್ದೇ ಬಂತು, ಗಂಟೆ ಹನ್ನೊಂದಾದರೂ ಯಾವ ಹಕ್ಕಿಯೂ ಈ ಈಜುಕೊಳದತ್ತ ಕತ್ತು ಚಾಚಿಯೂ ನೋಡಲಿಲ್ಲ. ಪ್ರತಿದಿನ ದಾಸವಾಳದ ಮಕರಂದ ಹೀರಲು ಹನ್ನೊಂದು ಗಂಟೆಯ ಹೊತ್ತಿಗೆ ಸೂರಕ್ಕಿಗಳು ಬರುತ್ತಿದ್ದವು, ಇವತ್ತು ಅವುಗಳ ಪತ್ತೆಯಿಲ್ಲ ಎಂದು ನಿರಾಶನಾಗಿ ಬೇರೇನೋ ಕೆಲಸದಲ್ಲಿ ತೊಡಗಿಕೊಂಡೆ.

ಬದುಕಲ್ಲಿ ಕೆಲವೊಮ್ಮೆ ನಿರೀಕ್ಷಿಸಿದ್ದು ನಿರೀಕ್ಷಿಸಿದ ಗಳಿಗೆಯಲ್ಲಿಯೇ ಸಿಗುವುದಿಲ್ಲ, ಮತ್ಯಾವುದೋ ಗಳಿಗೆಯಲ್ಲಿ ಸಿಕ್ಕಿಬಿಡುತ್ತದಂತೆ. ಹಾಗೇ ಆಯಿತು ನೋಡಿ. ನಾನು ಯಾವುದೋ ಕೆಲಸದಲ್ಲಿ ಲೀನನಾಗಿರುವಾಗ ಪುಟ್ಟ ಈಜುಕೊಳದಲ್ಲಿ ಎರಡು ಪಿಕಳಾರ ಹಕ್ಕಿಗಳು ಜಲಕ್ರೀಡೆಯಾಡುತ್ತಿದ್ದವು. ನೀರಲ್ಲಿ ಹಾಯಾಗಿ ರೆಕ್ಕೆ ಬಿಚ್ಚಿ, ಶವಾಸನ ಹಾಕಿದಂತೆ ಮಾಡಿ ಮತ್ತೆ ಅಲ್ಲಿರುವ ದಾಸವಾಳದ ಮರದಲ್ಲಿ ಕೂತು ರೆಕ್ಕೆ ಒಣಗಿಸಿಕೊಳ್ಳುತ್ತಿದ್ದವು. ಅಂತೂ ಈಜುಕೊಳಕ್ಕೆ ಅಧಿಕೃತ ಚಾಲನೆ ದೊರೆತಿತ್ತು.

ಈ ಹಕ್ಕಿಗಳುಈಜುಕೊಳಕ್ಕೆ ಇನ್ನೊಂದಷ್ಟು ಪಬ್ಲಿಸಿಟಿ ಕೊಟ್ಟು ಜಾಸ್ತಿ ಹಕ್ಕಿಗಳು ಬರುವಂತಾಗಲಿ ಎಂದು ಆಶಿಸಿದೆ. ಮರುದಿನ ನೋಡುತ್ತೇನೆ, ನಾಲ್ಕು ಪಿಕಳಾರ ಹಕ್ಕಿಗಳು ಒಂದರ ನಂತರ ಮತ್ತೊಂದು ಸಾಲಿನಲ್ಲಿ ಈಜಲು ಸಿದ್ಧವಾಗಿ ನಿಂತಿದ್ದವು. ಆಗಲೇ ರಾಬಿನ್ ಹಕ್ಕಿಗಳು, ಎರಡು ಮಟಪಕ್ಷಿಗಳು ದಾಸವಾಳದ ಗಿಡದ ಮೇಲೆ ಕುಳಿತು, 'ನಾವು ಯಾವಾಗ ಈಜೋದು?' ಎಂದು ಕಾಯುತ್ತಿದ್ದವು. ಒಂದಷ್ಟು ಹೊತ್ತು ಪಿಕಳಾರ ಹಕ್ಕಿಗಳು ಚೆಂದವಾಗಿ ಈಜಾಡಿ ಕೊನೆಗೆ ಈಜುಕೊಳ ಬಿಟ್ಟುಕೊಟ್ಟವು. ಆಗ ಅಲ್ಲಿ ಕಾಯುತ್ತಿದ್ದ ರಾಬಿನ್ ಹಕ್ಕಿಗಳು ಈಜುಕೊಳಕ್ಕೆ ಧುಮುಕಿ ಜಲಕ್ರೀಡೆ ಶುರುಮಾಡಿದವು. ಕೊನೆಗೆ ಅವರದ್ದಾದ ಮೇಲೆ ಮಟಪಕ್ಷಿಯ ಸರದಿಯೂ ಆಯ್ತು. ಹೀಗೆ ಪ್ರತಿದಿನವೂ ಬೇರೆ ಬೇರೆ ವೇಳೆಗಳಲ್ಲಿ ಬೇರೆ ಬೇರೆ ಜಾತಿಯ ಹಕ್ಕಿಗಳು ಇಲ್ಲಿ ಈಜಾಡಿ ಸುತ್ತಲಿನ ಪಕ್ಷಿ ಲೋಕದಲ್ಲಿ ಈ ಈಜುಕೊಳದ ಬಗ್ಗೆ ವ್ಯಾಪಕ ಪ್ರಚಾರವೂ ಆಯ್ತೆಂದು ಕಾಣುತ್ತದೆ. ಹಕ್ಕಿಗಳ ಸಂಖ್ಯೆ ಜಾಸ್ತಿಯಾಯ್ತು. ಕಾಗೆ, ಕೋಗಿಲೆಗಳೂ ಒಂದರೆ ಕ್ಷಣವಾದರೂ ಈಜುಕೊಳಕ್ಕೆ ಬಂದು ಮೈ ತಣ್ಣಗೆ ಮಾಡಿಕೊಂಡು ಹೋಗಲು ಶುರುಮಾಡಿದವು.

ಮೊನ್ನೆ ಏಪ್ರಿಲ್ ತಿಂಗಳ ಕೊನೆಗೆ ಜೋರು ಮಳೆ ಬಂದಾಗ ಈಜುಕೊಳ ಮಳೆ ನೀರಿನಿಂದ ತುಂಬಿಹೋಗಿತ್ತು. ಯಾವಾಗಲೂ ಹಾಕುವ ಬಾವಿ ನೀರಿಗಿಂತ ತಂಪಾಗಿದ್ದ ಆ ಮಳೆ ನೀರಿನಲ್ಲಿ ಕಾಡು ಮೈನಾ ಹಕ್ಕಿಗಳು ಯಾವತ್ತಿಗಿಂತಲೂ ಜಾಸ್ತಿ ಸಂಭ್ರಮದಿಂದ ಆಡುತ್ತಿದ್ದದ್ದನ್ನು ನೋಡಿ ನಾನೂ ಆ ನೀರಿನಲ್ಲಿ ಕರಗಿಹೋದಂತನ್ನಿಸಿತು. ಈಗ ಪ್ರತಿ ದಿನವೂ ರಾಬಿನ್ ಹಕ್ಕಿ, ಪಿಕಳಾರ, ಮಟಪಕ್ಷಿ, ಮೈನಾ, ನವರಂಗ, ಕಾಜಾಣ, ಕೋಗಿಲೆ, ಮೊದಲಾದ ಪಕ್ಷಿಗಳೆಲ್ಲಾ ನಮ್ಮ ಪುಟ್ಟ ಈಜುಕೊಳದ ಸದಸ್ಯರಾಗಿದ್ದಾರೆ. ■





